1	2	3	4	5	6
4.	ಗಂಡೋರಿನಾಲಾ	–	6600.00	13295.00	7371.62
5.	ಹಿರೇಹಳ್ಳ	1340.00	635.00	17200.00	14765.91
6.	ಮುಲ್ಲಾಮಾರಿ ಕೆಳದಂಡೆ	7666.00	7188.00	13406.00	11287.97
7.	ಮಷ್ಕಿನಾಲಾ	2714.00	311.00	4700.00	3981.16
8.	ಹರಿನಾಲಾ	3480.00	2695.00	5556.00	3720.36
9.	ಅರ್ಕಾವತಿ	–	2225.00	11000.00	7328.36
10.	ಹುಚ್ಚನಕೊಪ್ಪಲು	–	690.00	2750.00	1482
11.	ಇಗ್ಗಲೂರು	3369.00	342.00	6965.00	4996.1
12.	ಕಾಮಸಮುದ್ರ	800.00	630.00	2875.00	1950.04
13.	ಮಂಚನಬೆಲೆ	1288.00	237.36	7465.00	7000.75
14.	ತಾರಕ	7090.00	170.00	5110.00	2795.37
15.	ಉಡುತೊರೆಹಳ್ಳ	250.00	755.00	15610.00	12583.58
16.	ವಾಟೆಹೊಳೆ	7487.00	205.00	5250.00	4404.46
17.	ನಂಜಾಮರ ಏತ	–	2840.00	3160.00	401.06
18.	ಚುಲ್ಕನಾಲಾ	4047.00	379.76	7000.00	6445.57
19.	ಶಿಂಷಾ ಆಧುನೀಕರಣ	–	330.00	1000.00	131.97
	ಒಟ್ಟು	178884.00	27685.12	146375.00	109689.26

ಕೇಂದ್ರ ಸರ್ಕಾರದಿಂದ ಕೃಷ್ಣಜಲ ಭಾಗ್ಯ ಜಲನಿಗಮದ ಕಾಮಗಾರಿಗಳಿಗೆ ಸಹಾಯಧನ

4684 (5434) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ಕೃಷ್ಣಾ ಭಾಗ್ಯ ಜಲ ನಿಗಮದ ಕಾಮಗಾರಿಗಳಿಗಾಗಿ AIBP (Accelearated irrigation Development program) ಅಡಿಯಲ್ಲಿ ಬಂದಿರುವ ಸಹಾಯಧನವೆಷ್ಟು? (ವರ್ಷವಾರು ಪೂರ್ಣ ವಿವರಗಳನ್ನು ನೀಡುವುದು).

ಆ) ಈ ರೀತಿ ಪೂರ್ತಿ ಹಣವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಕಾಮಗಾರಿಗಳ ಇನ್ನುಳಿದ ಕೆಲಸಗಳನ್ನು ಮುಗಿಸಲು ಉಪಯೋಗಿಸಲಾಗುತ್ತಿದೆಯೇ?

ಇ) ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯ ಕೆನಾಲ್ ಲೈನಿಂಗ್ ಇನ್ನಿತರ ಕೆಲಸಗಳಿಗಾಗಿ ಇನ್ನು 640 ಕೋಟಿಗಿಂತ ಹೆಚ್ಚು ಹಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯ ಎಲ್ಲ ಕೆಲಸಗಳನ್ನು ಪೂರ್ತಿಗೊಳಿಸಲು ಪೂರ್ತಿ ಪ್ರೋಗ್ರಾಂ (ಕಾರ್ಯಸೂಚಿ) ಅನುಮೋದಿಸಲಾಗಿದೆಯೇ;

ಉ) ಸರ್ಕಾರ ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯ ಬಾಕಿ ಉಳಿಯುವ ಇನ್ನೂ 140 ಕೋಟಿ ರೂ.ಗಳಷ್ಟು ವ್ಯಯದ ಕಾರ್ಯಕ್ರಮಗಳನ್ನು ಅನುಮೋದಿಸಿರುವುದಿಲ್ಲ ಎನ್ನುವ ಸಂಗತಿ ನಿಜವೆ;

1	2	3	4	5	6

ಊ) ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ನೀಡಲಾದ ಎ.ಐ.ಬಿ.ಪಿ. ಹಣವನ್ನು ಬೇರೆ ಯೋಜನೆಗಳಿಗಾಗಿ ತಿರುಗಿಸಿರುವುದು ನಿಜವೆ;

ಎ) ಹಾಗಿದ್ದಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯಲ್ಲಿ ಬರುವ ಜನತೆಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ? (ವಿವರ ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) AIBP (Accelearated irrigation Development program) ಅಡಿಯಲ್ಲಿ 1996–97ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಘಟ್ಟ–1ರ ಹಂತ–3 ಹಾಗೂ 2001–02 ಮೇ ಸಾಲಿನಲ್ಲಿ ಘಟ್ಟ–2ರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರದಿಂದ ಕೃಷ್ಣಾ ಭಾಗ್ಯ ಜಲ ನಿಗಮದ ಕಾಮಗಾರಿಗಳಿಗಾಗಿ AIBP (Accelearated irrigation Development program) ಅಡಿಯಲ್ಲಿ ಒದಗಿಸಲಾಗಿರುವ ಸಹಾಯಧನದ ವರ್ಷವಾರು ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ವರ್ಷ	ಹಂತ –1	ಹಂತ –2	ಒಟ್ಟು
1996–97	57.00	–	57.00
1997–98	50.00	–	50.00
1998–99	50.00	–	50.00
1999–2000	100.00	–	100.00
2000–2001	100.00	–	100.00
2001–2002	200.00	250.00	450.00
2002–2003	181.00	275.05	456.05
ಒಟ್ಟು	738.00	525.00	1263.05

ಆ) ಬಿಡುಗಡೆ ಆದ ಹಣವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–1 ಘಟ್ಟ–3 ರ ಈ ಕೆಳಕಂಡ ಕಾಮಗಾರಿಗಳಿಗಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ.

1) ಇಂಡಿ ಶಾಖಾ ಕಾಲುವೆ ಕಿ.ಮೀ. 64–172 ವಿತರಣಾ ಕಾಲುವೆ 14 ರಿಂದ 46

2) ಜೇವರ್ಗಿ ಶಾಖಾ ಕಾಲುವೆ (ಪೂರ್ಣ) ವಿತರಣಾ ಕಾಲುವೆ 1 ರಿಂದ 18

3) ಆಲಮಟ್ಟಿ ಎಡದಂಡೆ ಕಾಲುವೆ ಕಿ.ಮೀ. 0 ರಿಂದ 77 ವಿತರಣಾ ಕಾಲುವೆಗಳು

4) ಆಲಮಟ್ಟಿ ಎಡದಂಡೆ, ಬಲದಂಡೆ ಹಾಗೂ ಮುಳವಾಡ ಏತ ನೀರಾವರಿ ಯೋಜನೆಯ ಲೀಡ್ ಆಫ್ ಕಾಲುವೆ.

5) ಅನಗವಾಡಿ ಸೇತುವೆ

6) ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಮತ್ತು ಬಿಳಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳು.

1) 11000 ಎಕರೆ ಪ್ರದೇಶದ ಸ್ವಾಧೀನ

2) 1202 ಕಟ್ಟಡಗಳ ಸ್ವಾಧೀನ

3) 22 ಸೆಕ್ಟರ್‌ಗಳ ಅಭಿವೃದ್ಧಿ ಕಾಮಗಾರಿಗಳು

4) ಇಂಡಿ ಶಾಖಾ ಕಾಲುವೆ, ಜೇವರ್ಗಿ ಶಾಖಾ ಕಾಲುವೆ ಹಾಗೂ ಆಲಮಟ್ಟಿ ಎಡದಂಡೆ ಕಾಲುವೆಗಳಿಗೆ ಬೇಕಾಗಿರುವ ಭೂಸ್ವಾಧೀನ

ಎರಡನೇ ಹಂತದ ಕಾಮಗಾರಿಗಳು :–

1) ಆಲಮಟ್ಟಿ ಎಡದಂಡೆ ಕಾಲುವೆ ಕಿ.ಮೀ. 77–103 ವಿತರಣಾ ಕಾಲುವೆಗಳು.

2) ಆಲಮಟ್ಟಿ ಬಲದಂಡೆ ಕಾಲುವೆ ಕಿ.ಮೀ 0.00–121 ವಿತರಣಾ ಕಾಲುವೆಗಳು

3) ಮುಳವಾಡ ಏತ ನೀರಾವರಿ: ಪೂರ್ವ ಕಾಲುವೆ 0.00 ಕಿ.ಮೀ – 17
ಲೀಡ್ ಆಫ್‌ಕಾಲುವೆ 0.00 ಕಿ.ಮೀ. – 75

4) ನಾರಾಯಣಪುರ ಬಲದಂಡೆ ಕಾಲುವೆ 0.00 ಕಿ.ಮೀ.– 92

5) ಇಂಡಿ ಏತ ನೀರಾವರಿ ಕಿ.ಮೀ. 0.00–96.50 ವಿತರಣಾ ಕಾಲುವೆಗಳು

6) ರಾಂಪುರ ಏತ ನೀರಾವರಿ ಹಗೂ ವಿತರಣಾ ಕಾಲುವೆಗಳು

7) ಆಲಮಟ್ಟಿ ಎಡದಂಡೆ, ಆಲಮಟ್ಟಿ ಬಲದಂಡೆ ಮತ್ತು ಮುಳವಾಡ ಏತ ನೀರಾವರಿ

8) ರೇವತಿ ಕಟ್ಟೆ ಮತ್ತು ಕೊರ್ತಿ–ಕೊಲ್ಹಾರ ಸೇತುವೆಗಳಿಗಾಗಿ

9) ಆಲಮಟ್ಟಿ ಎಡದಂಡೆ, ಆಲಮಟ್ಟಿ ಬಲದಂಡೆ ಮತ್ತು ಮುಳವಾಡ ಏತ ನೀರಾವರಿ, ನಾರಾಯಣಪುರ ಬಲದಂಡೆ, ಇಂಡಿ ಏತ ನೀರಾವರಿ. ರಾಂಪುರ ಏತ ನೀರಾವರಿ ಹಾಗೂ ಆಲಮಟ್ಟಿ ಜಲಾಶಯ ಮುಳುಗಡೆಗಾಗಿ ಭೂ ಸ್ವಾಧೀನ.

ಇ) 1) ಕೆನಾಲ್ ಲೈನಿಂಗ್ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆ, ಘಟ್ಟ–1 ರ ಬಾಕಿ ಕೆಲಸಗಳಿಗಾಗಿ ರೂ. 1422.51 ಕೋಟಿಗಳಷ್ಟು ಬಂಡವಾಳ ಅವಶ್ಯವಿರುತ್ತದೆ.

2) ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣಕ್ಕಾಗಿ ಹಾಗೂ ಪರಿಹಾರ ಪಾವತಿಗಾಗಿ ರೂ. 395.00 ಕೋಟಿಗಳು.

3) ಬಾಗಲಕೋಟೆಯ ಪ್ರಾಧಿಕಾರದ ವಿಶೇಷ ಯೋಜನೆಯನ್ನು ಕೈಗೊಳ್ಳಲು ರೂ. 638.00 ಕೋಟಿಗಳು ಬೇಕಾಗಿರುವುದು ಸರ್ಕಾರದ ಗಮನದಲ್ಲಿದೆ.

ಈ) 1) ಈ ಕೃಷ್ಣಾ ಮೇಲ್ದಂಡೆ ಹಂತ – 1ರ ಯೋಜನೆಯ ಬಹುತೇಕ ಕಾಮಗಾರಿಗಳನ್ನು ಡಿಸೆಂಬರ್ 2004 ರೊಳಗೆ ಮುಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು.

2) ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–2 ರಲ್ಲಿ ಬರುವ ಕಾಮಗಾರಿಗಳನ್ನು ಹಂತಹಂತವಾಗಿ ಪೂರ್ಣಗೊಳಿಸಲಾಗುವುದು.

ಉ) ಕೃಷ್ಣಾ ಭಾಗ್ಯ ಜಲ ನಿಗಮವು ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಹಾಗೂ ನಿಗಮಕ್ಕೆ ಸರ್ಕಾರವು ವಹಿಸುತ್ತಿರುವ ಯೋಜನೆಗಳನ್ನು ಹಂತಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಊ) ಎ.ಐ.ಬಿ.ಪಿ.ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣಕಾಸನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಕಾಮಗಾರಿಗಳಿಗಾಗಿಯೇ ಬಳಸಲಾಗುತ್ತದೆ.

ಎ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.